ಎಂದಿನ ತುಂಟ ಸವಾಲು ವಿನುತಾಳಿಂದ.

ಯಾಕೆ ಬಾರದು? ಆದರೆ ಅದು ತನ್ನನ್ನು ಕಿವಿಗೊಟ್ಟು ಆಲಿಸುವವರ ಜೊತೆ ಮಾತ್ರ ಮಾತನಾಡುತ್ತದೆ. ಎಲ್ಲರ ಜೊತೆ ಅಲ್ಲ!

ಹೌದಾ!? ಯಾರಪ್ಪಾ ಆ ವ್ಯಕ್ತಿ!? ಮಸ್ಟ್ ಬಿ ವೆರಿ ಲಕ್ಕಿ!

ನಿಜ ಹೇಳ್ಲಾ? ಅದು ಬೇರೆ ಯಾರೂ ಅಲ್ಲ...

ಯಾರು..? ಹೇಳಿ ಪ್ಲೀಸ್. ರಾಜೂ... ಪ್ಲೀಸ್!

ಇಟ್ಸ್ ವಿನೂ... ಮೈ ಡಾರ್ಲಿಂಗ್!

ಹ್ಞಂ... ಶ್ಯೂರ್!?

ಪಕ್ಕಾ..! ಇಟ್ಸ್ ನೋಬಡಿ ಎಲ್ಸ್. ಡಾರ್ಲಿಂಗ್, ಇಟ್ಸ್ ಯು ಓನ್ಲಿ. ಮೈ ಎವೆರಿಥಿಂಗ್...

ಆಮ್ ಐ ಡ್ರೀಮಿಂಗ್..? ಗಾಡ್... ಕಾಂಟ್ ಬಿಲೀವ್!

ಮತ್ತೆರಡು ಗಂಟೆಗಳ ಕಾಲ ಚಾಟಿಂಗ್ ನಡೆಯಿತು. ಹಿಮ ಕರಗಿತ್ತು. ಮೇಘ ಸ್ಫೋಟವಾಗಿ ಮಳೆ ಸುರಿದಂತೆ ಅವರ ನಡುವೆ ಸಂಭಾಷಣೆ ನಡೆಯುತ್ತಿತ್ತು. ಹೃದಯಗಳು ಸಂಪೂರ್ಣವಾಗಿ ತೆರೆದುಕೊಂಡಿದ್ದವು. ಕೊನೆಗೆ,

ಮೈ ಹಾರ್ಟ್ ವಾಂಟ್ಸ್ ಸಮ್ ಥಿಂಗ್ ಹನಿ... ಪ್ರಸ್ತಾಪವಿಟ್ಟನು ರಾಜೇಶ.

ಮೈ ಇಯರ್ಸ್ ಆರ್ ರೆಡಿ ಟು ಲಿಸನ್... ವಿನುತಾ ಗುನುಗಿದಳು.

ಬಟ್... ಕಾಂಟ್ ಟೆಲ್ ನೌ..!

ವೈ... ಇನ್ನಾವುದರ ಅಡಚಣೆ? ಹೇಳು ರಾಜೂ...!

ಅಡಚಣೆಯೇನೂ ಇಲ್ಲ ವಿನೂ. ಆದ್ರೂ... ಹಿಂಜರಿದನಾತ.

ಆದರೆ!? ಏನು...? ಪ್ಲೀಸ್ ಡೋಂಟ್ ಕಿಲ್ ಮಿ. ಟೆಲ್, ಕಾಂಟ್ ವೈಟ್..!

ಇನ್ನೆಷ್ಟು ಸಮಯ ಹೀಗೇ ಚಾಟಿಂಗ್‌ನಲ್ಲೇ ದಿನ ಕಳೆಯೋದು ವಿನೂ? ಪ್ಲೀಸ್ ಲೆಟ್ಸ್ ಮೀಟ್ ವನ್ಸ್...!

ಸಂದೇಶ ತಲುಪಿಸಿಯಾಗಿತ್ತು. ಇದನ್ನು ಹೇಳಲು ಎಷ್ಟು ತ್ರಾಸಪಟ್ಟೆನಲ್ಲಾ...! ತನ್ನಲ್ಲೇ ವಿಸ್ಮಯಗೊಂಡ ರಾಜೇಶ್.

ಕೂಡಲೇ ಉತ್ತರ ಕಳಿಸದಿದ್ದರೂ, ವಿನುತಳಿಗೂ ಹೀಗೇ ಅನ್ನಿಸುತ್ತಿತ್ತು. ರಾಜೇಶನ ಮೇಲೆ ಪೂರ್ಣ ನಂಬಿಕೆ ಮೂಡಿತ್ತು ಆಕೆಗೆ. ಅಷ್ಟೊಂದು ವಿಶ್ವಾಸವನ್ನು ಈಗಾಗಲೇ ಗಳಿಸಿಕೊಂಡಿದ್ದಳು. ಆತನೇ ತನ್ನ ಬಾಳಿಗೆ ದಾರಿದೀಪವೆಂದು ಆಕೆ ನಿರ್ಣಯಿಸಿದ್ದಳು. ಆತನನ್ನು ಭೇಟಿಯಾಗಲು ಅವಳೂ ಬಯಸಿದ್ದಳು.

ಮುಂದಿನ ವಾರಾಂತ್ಯಕ್ಕೆ ಮೂರು ದಿನ ಸತತ ರಜೆಗಳಿದ್ದವು. ಹಬ್ಬ ಹರಿದಿನಗಳ ಸೀಸನ್. ಇದೇ ಶುಭ ಸಂದರ್ಭ. ತಮ್ಮ ಭೇಟಿಗೆ ಮುಹೂರ್ತ ಒದಗಿ ಬಂದಿತ್ತು. ರಾಜೇಶನೇ ಪ್ಲ್ಯಾನ್ ವಿವರಿಸಿದ. ಅನುಮತಿ ಕೊಡಲು ವಿನುತಳಿಗೆ ಯಾರ ಅಪ್ಪಣೆಯೂ ಬೇಕಾಗಿರಲಿಲ್ಲ. ಪ್ರೇಮ ಸಾಗರದಲ್ಲಿ ವಿಹರಿಸುತ್ತಿದ್ದ ಹೃದಯಗಳ ಮುಖಾಮುಖಿಗೆ ಗಳಿಗೆ ಕೂಡಿ ಬಂದಿತ್ತು.

ಇದುವರೆಗೆ ಚಾಟಿಂಗ್‌ನಲ್ಲಿಯೇ ಎಲ್ಲಾ ಮಾತುಕತೆಯಾಗ್ತಿತ್ತು. ತಮ್ಮಿಬ್ಬರ ಮೊದಲ ಭೇಟಿ ಜೀವನ ಪರ್ಯಂತ ನೆನಪಿನಲ್ಲಿ ಉಳಿಯುವಂತಾಗಬೇಕು. ಜೀವನಲ್ಲಿ ಇಂತಹ ಥ್ರಿಲ್ ಎಷ್ಟು ಸಲ ಸಿಕ್ಕೀತು! ಅದರ ಆಲೋಚನೆಯಲ್ಲಿಯೇ ಇಬ್ಬರೂ ಪುಳಕಿತರಾದರು. ವಿನುತಳನ್ನು ಪ್ರಥಮ ಬಾರಿಗೆ ಅಪ್ಪಿಕೊಂಡು ಅವಳ ಕಿವಿಯಲ್ಲಿ ಉಸುರಬೇಕಾದ ಮಾತುಗಳನ್ನು ಮನದಲ್ಲಿಯೇ ರಿಹರ್ಸಲ್ ನಡೆಸುತ್ತಿದ್ದ ರಾಜೇಶ್. ರಾಜೇಶನ ಹಸ್ತವನ್ನು ಹಿಡಿದುಕೊಂಡು ತನ್ನ ಕೆನ್ನೆಗಳಿಗೆ ಸ್ಪರ್ಶಿಸಿ ಸಿಹಿ ಮುತ್ತನ್ನಿಕ್ಕುವ ಸನ್ನಿವೇಶವನ್ನು ಕಲ್ಪಿಸಿಕೊಂಡು ರೋಮಾಂಚಿತಳಾಗುತ್ತಿದ್ದಳು ವಿನುತಾ.

ಇನ್ನು ಕೆಲವೇ ದಿನಗಳು. ಕ್ಯಾಲೆಂಡರ್ ದಿನಾಂಕವನ್ನು ಹೊಳೆಯುವಂತೆ ತೋರಿಸುತ್ತಿತ್ತು.

ಬುಧವಾರದ ಕೆಲಸ ಮುಗಿಸಿದಾಕ್ಷಣ ಇಬ್ಬರೂ ತಯಾರಿ ನಡೆಸಿದರು. ಮರುದಿನ ನಗರದ ಹೊರ ವಲಯದಲ್ಲಿನ ಖ್ಯಾತ ಹೋಟೆಲಿನಲ್ಲಿ ಭೇಟಿಗೆ ಸಮಯ ನಿಗದಿಯಾಗಿತ್ತು. ಭೇಟಿಯ ನಂತರ ಚರ್ಚಿಸಿ ಮುಂದಿನ ಕಾರ್ಯಕ್ರಮ ತೀರ್ಮಾನಿಸುವ ನಿರ್ಧಾರಕ್ಕೆ ಅವರು ಬಂದಿದ್ದರು. ಧರಿಸುವ ಬಟ್ಟೆ, ಕೊಡಬೇಕಾದ ಉಡುಗೊರೆ ಇತ್ಯಾದಿಯೆಲ್ಲಾ ಮೊದಲೇ ತಂದಿಟ್ಟಿದ್ದರು. ವಿನುತಳಿಗಾಗಿ ಚಿನ್ನದ ಸರವನ್ನು ಖ್ಯಾತ ಶೋರೂಮಿನಿಂದ ರಾಜೇಶ್ ಕೊಂಡು

